**ಸತ್ರ ಮೊಕದ್ದಮೆ ಸಂಖ್ಯೆಃ 66 /2024**

**ಪಿ.ಡಬ್ಲ್ಯೂಃ 2 (ಸಿಡಬ್ಲ್ಯೂಃ2 )**

**ಸಾಕ್ಷಿಯನ್ನು ದಿನಾಂಕ 16.07.2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮಧ್ಯಂತರ ಅರ್ಜಿಯ ಆದೇಶ ದಿಃ15.6.2026 ರ ಮೇರೆಗೆ ಪಾಟೀಸವಾಲುಃ 1, 3 ರಿಂದ 6 ನೇ ಆರೋಪಿತರ ಪರ ಶ್ರೀ ಬಿ.ಎಸ್ಃ(ಎಲ್.ಎ.ಡಿ.ಸಿ) ವಕೀಲರಿಂದ:**

**5.** ನನಗೆ ನಾನು ಮುಖ್ಯ ವಿಚಾರಣೆಯಲ್ಲಿ ಉಲ್ಲೇಖಿಸಿದ ಪಂಚನಾಮೆಯ ನಿಕಟಪೂರ್ವ ಯಾವುದೇ ತಿಳುವಳಿಕೆಯನ್ನು ನೀಡಿರಲಿಲ್ಲ. ಪಂಚನಾಮೆಯಲ್ಲಿ ಬರೆದಿರುವ ವಿಷಯಗಳ ಬಗ್ಗೆ ನನಗೆ ಗೊತ್ತಿಲ್ಲ. ನಾನು ಪೊಲೀಸರ ಸೂಚನೆಯ ಮೇರೆಗೆ ರುಜು ಮಾಡಿದ್ದೇನೆ. ಪಂಚನಾಮೆಯ ಬರವಣಿಗೆಯನ್ನು ಪೊಲೀಸರು ನನಗೆ ಓದಿ ಹೇಳಿರುವುದಿಲ್ಲ. ಪ್ರಶ್ನಿಸಿದಂತೆ ಪೊಲೀಸರು ಯಾವುದೇ ವಸ್ತುಗಳನ್ನು ನನ್ನ ಎದುರಿನಲ್ಲಿ ವಶಕ್ಕೆ ಪಡೆದಿಲ್ಲ.

**6.** ಪ್ರಕರಣದ ಸಾಕ್ಷಿ ಪ್ರಾಸಾ.1 ಯಾವುದೇ ಸೂಚನೆಯನ್ನು ನನ್ನ ಎದುರಿನಲ್ಲಿ ಪೊಲೀಸರಿಗೆ ನೀಡಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಉಲ್ಲೇಖಿಸಿದ ಫೋಟೋದಲ್ಲಿ ಫೋಟೋ ತೆಗೆದ ದಿನಾಂಕ , ಸಮಯ ಇತ್ಯಾದಿಗಳ ಬಗ್ಗೆ ನಮೂದು ಇಲ್ಲ. ಮುದ್ದೆಮಾಲುಗಳ ಮೇಲೆ ಪೊಲೀಸರು ನನ್ನ ಸಹಿ ಪಡೆಯಲಿಲ್ಲ.

**ಪಾಟಿ ಸವಾಲುಃ 2 ನೇ ಆರೋಪಿ ಪರ ಶ್ರೀ ಎಸ್ ಆರ್ ಎಸ್ಃ ವಕೀಲರು ಮೇಲಿನ ಪಾಟಿ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

**ಮರು ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ**

7. ನಾನು ಈ ದಿನ ಪಾಟಿ ಸವಾಲಿನಲ್ಲಿ ನುಡಿದ ಸಂಗತಿಗಳು ಸರಿ ಇವೆ. ನಾನು ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲು ಇಲ್ಲಃ**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

\

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಬಳ್ಳಾರಿ.**